ಎಕ್ಸ್‌ಪೆರಿಮೆಂಟಲ್ ಫಾರಂ.

ತಾರೀಖು 18ನೇ ಶಪ್ಟಂಬರ್ 1876.

ಫಾರಂ ಅಂದರೆ ವ್ಯವಸಾಯ ವಿಷಯದ ಅಜಮಾಯಿಷೀ ಜಮಿಾನಿನ ಸೂಪರಿಂಟೆಂಡೆಂಟರು ಇದರಿಂದ ತಿಳಿಯಪಡಿಸುವದೇನಂದರೆ,—ಯಾವದಿನದಲ್ಲಾಗಲಿ ಬೆಳಿಗ್ಯೆ 7 ಗಂಟೆಗಳವೊದಲು 9 ಗಂಟೆಗಳವರಿಗೆ ಫಾರಂ ಜಾಗಾದಲ್ಲಿ ಬರತಕ್ಕ ಅಮಲ್‌ದಾರರು, ನೇಟಿವ್ ಬೇಸಾಯಗಾರರು ಮತ್ತು ಬೇಸಾಯದ ವಿಷಯದೊಳಗೆ ಅಕ್ಕರೆವುಳ್ಳ ಜನಗಳು ಇವರುಗಳನ್ನು ಸದರೀ ಜಮಿಾನಿನಲ್ಲಿ ಬೆಳಿ ಇಡಲ್ಪಟ್ಟ ಹೊಸ ಫಸಲ್‌ಗಳ ಗುಣವನ್ನೂ ಹೊಸ ಸಾಧನಗಳ ಉಪಯೋಗಗಳನ್ನೂ, ವಿಧವಿಧವಾದ ಬೇಸಾಯದ ತರಹೇಗಳನ್ನೂ ಕುರಿತು ವಿವರಿಸುವಬಗ್ಯೆ ನೋಡಲಿಕ್ಕೆ ಅಪೇಕ್ಷೆಯುಳ್ಳವರಾಗಿದ್ದಾರೆ.

F. E. HARMAN,
Supt. of Experimental Farm.

TUMKUR DISTRICT.

Notice of an application by Mallakka for a certificate under Act XXVII of 1860.

ತುಮಕೂರು ಡಿ॥ ಜೆ॥ ಕಮ್ಮಿಷನರವರ ಕೋರ್ಟಿನಿಂದ.

ಸ್ರ 187—ನೇ ಇಸವೀ ಸಿವಿಲ್ ಮಿಸಲೇನಿಯಸ್ ಕೇಸ್ ನಂ॥ 21.

ಇದರಿಂದ ಸಮಸ್ತ ಜನಗಳಿಗೂ ಪ್ರಸಿದ್ಧಪಡಿಸುವದೇನಂದರೆ,—ಕೊರ್ಟಿಗೆರೇ ತಾಲ್ಲೂಕ್ ರಾಂಪುರದ ಗ್ರಾಮದ ವಾಸಸ್ಥನಾಗಿ ಯಿದ್ದ ಪಾತಿಯಾದ ನಾಗಪ್ಪ ಯಂಬುವನಿಗೆ ಇತರರಯಿಂದ ಬರಬೇಕಾಗಿ ಇರುವ 1000 ರೂಪಾಯಿಗಳು, ವಸೂಲು ಮಾಡಿ ಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟ್‌ಪ್ರಕಾರ ಸರಟಿಫಿಕೇಟ್ ಅಪೇಕ್ಷಿಸಿ, ಇವನ ಹೆಂಡತಿ ಚನ್ನಮ್ಮ ಮೈನರ್ ಸಬಬ್ ಇವಳ ಪೋಷಕಳಾದ ವರ್ತಿಹಳ್ಳಿ ಮಲ್ಲಕ್ಕ ಯಂಬುವಳು ದಾಖಲ್ ಮಾಡಿ ಇರುವ ಅರ್ಜೀಯನ್ನು 187 ನೇ ಇಸವೀ ಅಕ್ಟೋಬರ್ ತಿಂಗಳು 2ನೇ ತಾರೀಖಿನಲ್ಲಿ ವಿಮರ್ಶೆ ಮಾಡುತ್ತೇವಾದ್ದರಿಂದ ಇದಕ್ಕೆ ತಕರಾರ್ ಮಾಡುವರ್ಯಾರಾದರೂ ಇದ್ದರೆ, ಈ ಕೋರ್ಟು ರೂಬರೂ ಸದರೀ ತಾರೀಖು ದಿವಿ 10 ಘಂಟೆಗೆ ಹಾಜರಾಗಬೇಕಾಗಿ ಇರುತೆ.

ತಾರೀಖು 2ನೇ ಮೊಹೇ ಶಪಟಂಬರ್ 1876ನೇ ಇಸವೀ ಮೊಕ್ಕಾಂ ತುಮಕೂರ್.

T. E. WOODCOCK,
Offg. Dy. Commr.

MYSORE DISTRICT.

Notice of an application by Gopalaiengar for a certificate under Act XXVII of 1860.

ಮೈಸೂರು ಡಿ॥ ಡೆ॥ ಕಮ್ಮಿಷನರವರ ಕೋರ್ಟಿನಿಂದ.

ಸ್ರ 1876ನೇ ಇಸವಿ ಸಿವಿಲ್ ಮಿಸಲೆನಿಯಸ್ ನಂಬರ್ 64.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ,—ಪಾತಿಯಾದ ಕುಪ್ಪನೈಯ್ಯಂಗಾರ್ ಕೃಷ್ಣಯ್ಯಂಗಾರ್ರಿಗೆ ಬರಬೇಕಾದ 500 ಐನೂರು ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್‌ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ಯಡತೊರೆ ತಾಲ್ಲೂಕು ತಿಪ್ಪೂರ್ ಸ್ಥಳದಲ್ಲಿ ಇರುವ ಡಿಟೋ ಕುಪ್ಪನೈಯ್ಯಂಗಾರ್ ಕೃಷ್ಣಯ್ಯಂಗಾರ್ರು ಸ್ವೀಕೃತ ಮಗ ಶ್ರೀನಿವಾಸ ನರಸುಂಹನ ಪೋಷಕ ಗೋಪಾಲೈಯ್ಯಂಗಾರ್ರು ಯಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನು ಶಪ್ಟಂಬರು ತಿಂಗಳು 28ನೇ ತಾರೀಖು ದಿವಿ 11 ಗಂಟೆಗೆ ಹಿಯರಿಂಗ್ ಮಾಡುವದ್ದರಿಂದ ಇದರ ಮೇಲೆ ತಕರಾರು ವುಳ್ಳವರು ಆತಾರೀಖುದಿವಿ 11 ಗಂಟೆಗೆ ಸುಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರತಕರಾರನ್ನು ಸ್ಥಿರಪಡಿಸಿಕೊಳ್ಳತಕ್ಕದಿದೆ.

Notice of an application by Srinivasachar for a certificate under Act XXVII of 1860.

ಸ್ರ 1876ನೇ ಇಸವಿ ಸಿವಿಲ್ ಮಿಸಲೆನಿಯಸ್ ನಂಬರ್ 65.

ಇದರಿಂದ ಸವ ಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ,—ಪಾತಿಯಾದ ತನ್ನ ತಂದೆ ವೆಂಕಟ್ಟಾಯಾಚಾರಿಗೆ ಬರಬೇಕಾದ (300) ಮುನ್ನೂರು ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪ್ರಕಾರ ಸರಟಿಫಿಕೇಟ್

ಆಗಬೇಕೆಂದು ನಂಜನಗೂಡು ಕಸಬಾ ಸ್ಥಳದಲ್ಲಿ ಇರುವ ಶ್ರೀನಿವಾಸಾಚಾರಿ ಯಂಬುವನು ಕೊಟ್ಟು ಇರತಕ್ಕ ಅರ್ಜಿಯನ್ನು ಸಪ್ಟೆಂಬರ್ ತಿಂಗಳು 28ನೇ ತಾರೀಖು ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದ್ದರಿಂದ ಇದರಮೇಲೆ ತಕರಾರ್ ವುಳ್ಳವರು ಆತಾರೀಖುದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರನ್ನು ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ.

Notice of an application by Bettalinge gauda for a certificate under Act XXVII of 1860.

ಸ್ರ 1876ನೇ ಇಸವೀ ಶಿವಿಲ್ ಮಿಸಲೆನಿಯಸ್ ನಂಬರ್ 66.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ತಮ್ಮ ಬೆಟ್ಟಿಜನ್ನೆ ಗೌಡನಿಗೆ ಬರಬೇಕಾದ (400) ರೂಪಾಯಿಗಳನ್ನಾ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವೀ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ಗುಂಡ್ಲು ಕಸಬಾ ಸ್ಥಳದಲ್ಲಿಯಿರುವ ಡಿಟೋ ಜನ್ನೇಗೌಡನ ಅಣ್ಣ ಬೆಟ್ಟ ಲಿಂಗೇಗೌಡ ನೆಂಬುವನು ಕೊಟ್ಟುಯಿರತಕ್ಕ ಅರ್ಜೀಯನ್ನು ಸೆಪ್ಟಂಬರ್ ತಿಂಗಳು 28ನೇ ತಾರೀಖು ದಿವಿ 11 ಘಂಟೆಗೆ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರ್ ವುಳ್ಳವರು ಆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂಬ್ ಹಾಜರಾಗಿ ಅವರವರ ತಕರಾರನ್ನ ಸ್ಥಿರಪಡಿಸಿ ಕೊಳ್ಳತಕ್ಕದ್ದಿದೆ

ತಾರೀಖು ನೇ ಮೂಹೇ ಸಪ್ಟಂಬರ್ ಸ್ರ 1876ನೇ ಇಸವೀ ಮೊಕ್ಕಾಂ ಮೈಸೂರು.

Notice of an application by Venkatachar for a certificate under Act XXVII of 1860.

ಸ್ರ 1876ನೇ ಇಸವಿ ಶಿವಿಲ್ ಮಿಸಲೀನಿಯಸ್ ನಂ. 67.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಫಾತೀಯಾದ ತನ್ನ ಅಂಣ ಲಕ್ಷ್ಮಿಪುರಂ ಚಿನ್ನಕೃಷ್ಣಮೂಚಾರ್ರಿಗೆ ಬರಬೇಕಾದ 900 ರೂಪಾಯಿಗಳನ್ನ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಆಗಬೇಕೆಂದು ತಲಕಾಡ್ ತಾಲ್ಲೂಕು ಸೊಸಲೇ ಹೋಬಳಿ ಶ್ರೀರಂಗರಾಜಪುರದಲ್ಲಿ ಯಿರುವ ಲಕ್ಷ್ಮಿಪುರಂ ವೆಂಕಟಾಚಾರ್ರಂಬುವನು ಕೊಟ್ಟು ಯಿರತಕ್ಕ ಅರ್ಜೀಯನ್ನು ಅಕ್ಟೋಬರ್ ತಿಂಗಳು 10ನೇ ತಾರೀಖು ದಿವಿ 11 ಗಂಟೆಗೆ ಹಿಯರಿಂಗ್ ಮಾಡುವದ್ದರಿಂದ ಯಿದರ ಮೇಲೆ ತಕರಾರು ವುಳ್ಳವರು ಆ ತಾರೀಖು ದಿವಿ 11 ಗಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ತಕರಾರನ್ನ ಸ್ಥಿರಪಡಿಸಿಕೊಳ್ಳತಕ್ಕದ್ದಿದೆ.

ತಾರೀಖು 14ನೇ ಮೂಹೇ ಸಪ್ಟಂಬರು ಸ್ರ 1876ನೇ ಇಸವಿ, ಮೊಕ್ಕಾಂ ಮೈಸೂರು.

E. C. SHANMUGAVELU PILLE,
For Dy. Commr.

HASSAN DISTRICT.

Notice of an application by Ranganna for a certificate under Act XXVII of 1860.

ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ತಿಳಿಯಪಡಿಸುವದೇನಂದರೆ, ಮಂಜರಾಬಾದ್ ತಾಲ್ಲೂಕು ಸಕಲೇಶಪುರದಲ್ಲಿಯಿರುವ ಬೈಕೆರೆ ಶಾನುಭೂಗ ಪುಟ್ಟಯ್ಯನ ಮಗ ರಂಗಂಣ ನೆಂಬುವನು ಫಾತೀಆದ ತನ್ನ ತಂದೆ ಪುಟ್ಟಿಗನ ಸಾಲ 300 ರೂಪಾಯಿ ವಸೂಲ್ಮಾಡಿಕೊಳ್ಳುವದಕ್ಕೆ 60ನೇ ಇಸವಿ 27ನೇ ಆಕ್ಟು ಮೇರೆ ಸರ್ಟಿಫಿಕೇಟ್ ಕೊಡಿಸಬೇಕೆಂತ ಕೊಟ್ಟು ಅರ್ಜೀ ಫೈಸಲ್‌ಬಗ್ಯೆ ಸ್ರ ಮಜಕೂರು ಸಪ್ಟಂಬರ್ 25ನೇ ತಾರೀಖನ್ನ ನಿಷ್ಕರ್ಷೆ ಮಾಡಿ ಇರುವದರಿಂದ ತಕರಾರು ಇರತಕ್ಕವರೆಲ್ಲ ಮೇಲೆ ಕಂಡ ತಾರೀಖು ಹಗಲು 10 ಘಂಟೆಗೆ ಕೋರ್ಟು ಇದ್ದ ಮೊಕ್ಕಾಮಿಗೆ ರೂಬರೂ ಹಾಜರಾಗಿ ಜಾಹಿರ್ ಮಾಡಿಕೊಳ್ಳತಕ್ಕದ್ದಿದೆ.

ತಾರೀಖು 25—8—76.

H. E. MOTTET,
Dy. Commr.

NAGAR DIVISION.

ನಂ 18. ತಾರೀಖು 14ನೇ ಆಗಸ್ಟು 1876.

ಜೆನ್ನಗಿರಿ ಮರಹವ್ಮತ್ ಮುತ್ಸದ್ದಿ ರಾಮಪ್ಪನಿಗೆ ಬಗರ್ ತಲಬ್ 15 ದಿವಸಗಳ ಜಾಸ್ತೀ ರಜಾ ಕೊಡಲ್ಪಟ್ಟಿರುತ್ತೆ.

ನಂ. 19. ತಾರೀಖು 8ನೇ ಸಪ್ಟೆಂಬರ್ 1876.

ಜನ್ನಗಿರಿ ತಾಲ್ಲೂಕು ಮರಹವ್ಮತ್ ಮುತ್ಸದ್ದಿ ರಾಮಪ್ಪನಿಗೆ ಬಗರ್ ತಲಬ್ 2 ತಿಂಗಳ ಜಾಸ್ತೀ ರಜಾ ಕೊಡಲ್ಪಟ್ಟಿರುತ್ತೆ.

ನಂ. 20. ತಾರೀಖು 12ನೇ ಸಪ್ಟೆಂಬರ್ 1876.

ರಾಮರಾಯರು ಕಡೂರು ಡಿಸ್ಟ್ರಿಕ್ಟಿನಲ್ಲಿ ಹಂಗಾಮೀ ಮೇಸ್ತ್ರಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

J. A. CAMPBELL,
Commissioner.

KADUR DISTRICT.

Notice of an application by Dasanna for a certificate under Act XXVII of 1860.

ಕಡೂರು ಡಿ॥ ಜೆ॥ ಕಮ್ಮಿಷನರವರ ಕೋರ್ಟಿನಿಂದ.

ಇದರಿಂದ ಸಮಸ್ತ ಜನರಿಗೂ ಪ್ರಸಿದ್ಧ ಪಡಿಸುವದೇನಂದರೆ, ಬಾಣಾವಾರ ತಾಲ್ಲೂಕು ವಕ್ಕಲಗೆರಿ ಮೂಗಣೇ ಹಂಚೀಹಳ್ಳಿ ಗಾ) ಮದ ನಿವಾಸಸ್ಥ ಕುರಬರ ಕಾರೆಹಳ್ಳಿ ಮಂಗಜ್ಜನಮಗ. ದಾಸಂಣನು ಪಾತೀ ಪಟ್ಟಿ ತನ್ನ ತಂಬೆ ಮಂಗಜ್ಜನ ಹೆಸರಿನಲ್ಲಿ ಇರತಕ್ಕ ತಮನೂಕುಗಳ ಮೊಬಲಗು 500 ರೂಪಾಯಿ ವಸೂಲ್ಮಾಡಿಕ್ಕೊಳ್ಳತಕ್ಕಬಗ್ಗೆ ಸ್ರ 1860ನೇ ಇಸವಿ 27ನೇ ಆಕ್ಟು ಪ್ರಕಾರ ತನ್ನ ಹೆಸರಿಗೆ ಸರ್ಟಿಫಿಕೇಟ್ ಕೊಡಿಸಬೇಕೆಂತ ಈ ಕೋರ್ಟಿಗೆ ದಾಖಲ್ಮಾಡಿರುವ ಅರ್ಜೀಯನ್ನು ಫೈಸಲ್ಬಗ್ಗೆ ಬರುವ ಆಕ್ಟೋಬರ್ ತಿಂಗಳ 11ನೇ ತಾರೀಖಿನ ದಿವಸ ನಿಶ್ಚಯಿಸಿ ಯಿರುವದರಿಂದ ಈಬಗ್ಗೆ ತಕರಾರು ವುಳ್ಳವರು ಆ ತಾರೀಖು ಹಗಲು 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗಿ ಜಾಹಿರ್ಮಾಡಿಕ್ಕೊಳ್ಳತಕ್ಕದ್ದು.

ಬತಾರೀಖು 9ನೇ ಸಪ್ಟೆಂಬರ್ ಸ್ರ 1876 ಮೊಕ್ಕಾಂ ಚಿಕ್ಕಮಗಳೂರು.

Notice of a torch robbery in the house of one Srinivasaiengar at Macheri, Banavar Taluk on the 4th instant.

ಯಾದಾಸ್ತು ಮಚೇರೀ ಶ್ರೀನಿವಾಸೈಯಂಗಾರ್ರ ಮನೆಯಲ್ಲಿ ಮೂಹೇ ಮಜಕೂರ್ ತಾರೀಖು 4ನೇ ರಾತ್ರೆ 12 ಗಂಟೆ ವ್ಯಾಳ್ಯೆಯಲ್ಲಿ 20 ಜನರ ವರಿಗೆ ಕಳ್ಳರು ಬಂದು ಮುಫ್ಲಾಲ್ನಿಶಿ ಮನೆ ನುಗ್ಗಿ ಮುದ್ದೆಬ ವಗೈರೇರಿಗೆ ಹಂಸಿ ಕಳವು ಮಾಡಿಕ್ಕೊಂಡು ಹೋದ ಮಾಲ್ ಪಟ್ಟಿ, ಬಾಣಾವಾರ ತಾಲ್ಲೂಕು ಕಡೂರು ಡಿಸ್ಟ್ರಿಕ್ಟು ಕಸಬಾ ಜಮಾವಾರ ರೂಬರೂ ಬರಸಿದ ತಾರೀಖು 5—9—76,

ಅಡಿಗೇ ಮನೆ ಕದಬಾಗಿಲ ಗೂಡಿನಲ್ಲಿ ಅಟ್ಟದ ಮೇಲೆ ದಕ್ಷಿಣ ಗೋಡೇ ವೊಳಗೆ ಹುಗದು ಯಿಟ್ಟಿದ್ದ ಕಲ್ಸೋರೆ ವಳಗಿನ ನಗಗಳು ನಗದು ವಗೈರೇ ತಪಸೀಲ್.

ಬಂಗಾರದ ನಗೆಗಳು.	ರೂ.	ಆ.
ರಾಗಟಿ ಬೆಳ್ಳೀಬಿಲ್ಲೆ ಹಾಕಿದ್ದರ ಬಾಬತು 6 ವರಹಾ ತೂಕ	30	0
ಚೌರೀಕೊಟ್ಟು ಮೂರು ವರಹಾ ತೂಕ	15	0
ಕ್ಯಾದಿಗೆ 2½ ವರಹಾ ತೂಕ.	12	0
ಜಾವಂತಿಗೆ ಹುವ್ವೆಗಳು ರಖಂ 1ಕ್ಕೆ 5 ವರಹಾ ತೂಕ ರಖಂ 1ಕ್ಕೆ 3 ವರಹಾ ವಿದೆ.	40	0
ಜಡೆಗೊಂಡೆ 2ಕ್ಕೆ 2½ ವರಹಾ ತೂಕ.	12	0
ಕೈ ಬಳೆ ಜೊತೆ 1ಕ್ಕೆ 20 ವರಹಾದ್ದು	100	0
ವುಗರಡ್ಡಿಕೆ 3ಕ್ಕೆ 14 ವರಹಾ ತೂ॥ 2 ಯಂಟು ವರಹಾ ಬಾಬತು 1 ಅಂತು 3ಕ್ಕೆ.	180	0
ವಾಲೇಸರಫಣಿ ಜೊತೆ 2ಕ್ಕೆ 14 ವರಹಾ ತೂ॥	90	0
ಕೆಂಪು ಯಮುನಾ ಕಲ್ಲು ಹಾಕಿದ ವುಂಗ್ರ ಅಕ್ಷರ ಕೆತ್ತಿ 4 ವರಹಾ ವಿದೆ.	20	0
ಕಣಾಣಿ 7 ಯೆಳ್ಳೇ ಬಾಬತು 20 ವರಹಾ ತೂಕ	100	0
ಹಸರು ಹರಳು ಹಾಕಿದ ವುಂಗ್ರ 1ಕ್ಕೆ ವಂದು ಕಡೆ ಗಂಟು ಮುರದು ಯಿದೆ 2 ವರಹಾ ತೂಕ.	11	0
ಕಂಠೀರಾಯಿ ಹಣ 2ಕ್ಕೆ	1	0
ಜೋಡು ಗೊಂಬೇ ವರಹಾ 2.	9	0
ಗೋಲು 1ಕ್ಕೆ ವಂದು ವರಹಾ.	5	0
ಯದರ ಕಾಡಿ ಕೊಳಪೆಯಲ್ಲಿ ಯಿಟ್ಟಿದ್ದ ಬಂಗಾರ ½ ವರಹಾಕ್ಕೆ	2	0
ಡಿಟೋ ಕೊಳಪೆಯಲ್ಲಿ ಯಿಟ್ಟ ಕೆಂಪಿನ ಹರಳು ಸುಮೊರು 30ಕ್ಕೆ	1	0

ಬೆಳ್ಳಿ ನಗಗಳು,		
ಪಂಚಪಾತ್ರೆ 2ಕ್ಕೆ ಸುಮಾರು ಕೇರು 2ಕ್ಕೆ	48	0
ವುದ್ಧರಣೆ 2 ರೂಪಾಯಿ ತೂಕ	2	0
ದೊಡ್ಡ ಬಟ್ಲು 1ಕ್ಕೆ 9 ರೂಪಾಯಿ ತೂಕ	9	0
ಸಣ್ಣ ಬಟ್ಲು 3ಕ್ಕೆ 3 ರೂಪಾಯಿ ತೂಕ	3	0
ವುಡುದಾರ 10 ರೂಪಾಯಿ ತೂಕ	10	0
ಕೈಬಳೆ ಜೊತೆ 1ಕ್ಕೆ 10 ರೂಪಾಯಿ ತೂಕ.	10	0
ಪಾಡಗ ಜೊತೆ 1ಕ್ಕೆ 12 ರೂಪಾಯಿ ತೂಕ.	12	0
ಸುಂಣದ ಕಾಯಿ 6 ರೂಪಾಯಿ ತೂಕ.	6	0
ನಗದು ರೂಪಾಯಿಗಳು.	1500	0
ರಾಜಾ ರೂಪಾಯಿ	50	0
ಗಿಡ್ಡಿ ಕುಂಭಣಿ ರೂಪಾಯಿ	40	0
ಮುದ್ದೆಲ್ಲ ಹೆಂಡತಿ ಬಲಗ್ಯೆ ಕಡಗಪಾತ್ರೆ ಬಳೆ 1ಕ್ಕೆ 1 ವರಹಾ ತೂಕ	7	8
ಬಂಗಾರದ ತಿರುಪಿನ ಮಂಗಲದ ತಾಳಿ ವೊಂದು ಗುಂಡು 20 ತೂಕ 3 ವರಹಾ	15	0
ಮುದ್ದೆಲ್ಲ ಮಗಳ ಕೊರಳಲ್ಲಿ ಯಿದ್ದ ಬಟ್ಟು ತಾಳಿ ಗುಂಡಿನ ಸರಾ 1ಕ್ಕೆ ಗುಂಡು 30 ತಾಳಿ 1 2½ ವರಹಾ ತೂಕ.	12	0
ಬಳೆ ವೊಂಟು 1ಕ್ಕೆ ಹುಡುಗರ ಬಾಬತು 5 ರೂಪಾಯಿ ತೂಕ	5	0
ಕಬ್ಬಿಣದ ಹಾರೆ 1ಕ್ಕೆ 1½ ವೊಳದ ಬಾಬತು.	0	8
ಕಬ್ಬಿಣದ ಕೊಡ್ಲಿ 2ಕ್ಕೆ	0	8
	2,339	8

MAHOMED SALIHA,
For Dy. Commr.

CHITALDROOG DISTRICT.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಜುಡಿಷಲ್ ಅಸಿಸ್ಟೆಂಟ್ ಕಮ್ಮಿಷನರವರ ಕೋರ್ಟ್.

ತಾರೀಖು 8ನೇ ಶಪ್ಟಂಬರ್ 1876.

ಇದರಿಂದ ತಿಳಿಸುವದೇನಂದರೆ,—ಹಳ್ಳೇ ಜುಡಿಷಲ್ ರಿಕಾರ್ಡಿಗಳನ್ನು ನಾಶಪಡಿಸುವ ಬಗ್ಗೆ ಹುಟ್ಟಿದ ರೂಲ್ಸ್ ಅನುಸರಿಸಿ, ಕಕ್ಷಿಗಾರ್ರಿಂದ ಈ ಕೋರ್ಟಿನೊಳಗೆ ಆರಿಜನಲ್, ಸ್ಯಾಲ್‌ಕಾಜ್ ಮೊಕದ್ದಮೆಗಳಲ್ಲಿ ಅವಲ್‌ಜಾರೀ ಮತ್ತು ಇತರ ಚಿಲ್ಲರೆ ಮೊಕದ್ದಮೆಗಳಲ್ಲಿ ವ ಪ್ರೊಸೀಡಿಂಗ್ಸ್‌ನೊಳಗೆ 1870ನೇ ಜನವರೀ ಮೊದಲು 1870ನೇ ಡಿಸಂಬರ್ 31ನೇ ಮುಕ್ತಾಂ ವರಿಗೆ ದಾಖಲಾದ ದರೋಬಸ್ತು ದಸ್ತಾವೇಜುಗಳು ಎಗ್ಜಿಬಿಟ್‌ಗಳು, ಲೆಕ್ಕಗಳು ಯಿತರ ಕಾಗದ ಪತ್ರಗಳು ಯಿವು 1876ನೇ ಡಿಸಂಬರ್ 30ರಲ್ಲು ನಾಶಪಡಿಸಲ್ಪಡುತ್ತೆ.

ಸದರೀ ಮೊಕದ್ದಮೆಗಳಿಗೆ ವ ಪ್ರೊಸೀಡಿಂಗ್ಸ್‌ಗೆ ಸಂಬಂಧಿಸಿ ಮೊಬಲಗಿನ ಬಾಬತು ಯಾವ ದಸ್ತಾವೇಜುಗಳನ್ನಾಗಲಿ ವಾಪಸ್ ಪಡೆಯುವ ಖಾಯಿಷ್ ಉಳ್ಳ ಕಕ್ಷಿಗಾರರು ಸದರೀ ತಾರೀಖಿಗೆ ಮುಂಚಿತವಾಗಿ ಕೋರ್ಟು ಆಗುವ ದಿನಗಳಲ್ಲಿ ಮಧ್ಯಾನ್ಹಾ ಪರ 1ಗಂಟೆಯ ಮೊದಲು 4 ಗಂಟೆಯ ವರಿಗೆ ಕೋರ್ಟು ಶಿರಸ್ತೇದಾರರಲ್ಲಿ ದರಖಾಸ್ತು ಮಾಡತಕ್ಕದ್ದು.

Notice inviting claimants, if any, to the house tendered by the Shroff, Chitaldroog Taluk Treasury, as a security for the office he holds.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟ್ ಚಿತ್ರದುರ್ಗದ ತಾಲ್ಲೂಕು ಖಜಾನಾ ನರಾಫ ಗುಂಡಪ್ಪನೆಂಬಾತನು ತನ್ನ ವುದ್ಯೋಗಕ್ಕಾಗಿ ಜಾಮೀನು ಖಾತರೇಬಗ್ಯೆ ಇದೆ ಚಿತ್ರದುರ್ಗದ ಕಸಬಾ ಟವ್ನನಲ್ಲಿ ಇರುವ ಸುಮಾರು 1000 ರೂಪಾಯಿ ಕ್ರಯ ಬಾಳಬಹುದಾದ ಮ್ಯುನಸಿಫಲ್ ನಂಬರು 851ನೇ ಬಾಬತು ತನ್ನ ಸ್ವಂತ ಮನೆಯನ್ನ ಸರ ಕಾರಕ್ಕೆ ಖಾತರಗೋಸ್ಕರ ಈಡು ಮಾಡಿಕೊಟ್ಟಿರುತ್ತಾನಾಗಿ ಈ ಮನೆಗೆ ಮತ್ಯಾರು ಹಕ್ಕು ಇದ್ದಾಗ್ಯೂ ಈ ಲಾಗಾಯಿತು 3 ತಿಂಗ ಳು ವಳಗಾಗಿ ಆಂತಾ ಹಕ್ಕು ವುಳ್ಳವರು ಕ್ರಮವಾದ ದಸ್ತೈವೇಜು ವಗೈರೆ ನಿಸೀ ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರೀ ಆಫಿಸರವರ ಬಳಿಗೆ ಹಾಜರಾಗಬೇಕು ಆ ವಾಯಿದೆ ನಂತರ ಹಾಜರಾಗುವ ಪಕ್ಷಕ್ಕೆ ಅಂತಾ ವಿಷಯ ಮಂಜೂರು ಮಾಡುವದಿಲ್ಲ ತಿಳಿಯುವದು.

ತಾರೀಖು 15ನೇ ಮಾಹೇ ಶಪ್ಟಂಬರು 1876ನೇ ಇಸವಿ ಚಿತ್ರದುರ್ಗ.

S. VENKAT VARDAIENGAR,
Treasury Officer.

ಸ್ ಱ 1876ನೇ ಇಸವಿ ಆಗಸ್ಟು ತಿಂಗಳ ಕೈಲಸ್ಥಿತೀ ರಿಪ್ಪೋರ್ಟು.

ಕೋಲಾರ ಡಿಸ್ಟ್ರಿಕ್ಟು.

ಮಳೆ—ಈ ಆಗಸ್ಟು ತಿಂಗಳಲ್ಲಿ ಸರಾಸರಿ 1 ಇಂಚ್ $8\frac{3}{4}$ ಸೆಂಟಸ್ ಮಳೆ ಬಿದ್ದಿರುತ್ತದೆ ಮಳೆ ಸಾಲದೆ ಹವ ಸಾಧಾರಣವಾಗಿ ಶಕೆಯಾಗಿತ್ತು.

ಜಮೀನು—5157—1—8 ರೂಪಾಯಿಗಳ ಕಂದಾಯ ಬಾಳುವ ಜಮೀನುಗಳು ಹೊಸದಾಗಿ ಸಾಗುವಳಿಗೆ ತೆಗದುಕೊಳ್ಳಲ್ಪಟ್ಟವು, ರಾಜೀನಾಮೆ ಮೂಲಕ ಯಾವವೂ ಬಿಟ್ಟಿರುವದಿಲ್ಲ.

ಫಸಲು—ಈ ತಿಂಗಳಲ್ಲಿ ಹುರಳಿ ಹುಚ್ಚೆಳ್ಳು ಪೈರಾವಾದವು ಸಜ್ಜೆ, ಹಬ್ಬೆಳ್ಳು ಕಟ್ಟುವಾದವು.

ಬಳುಬಲ್ಲಿರುವ ಫಸಲು—ಈ ತಿಂಗಳಲ್ಲಿ ಮಳೆ ಯಿಲ್ಲದೆ ಈಗ ಬೆಳೆಯಲ್ಲಿರುವ ಫಸಲು ವೆಣಗುತ್ತಾ ಯಿವೆ.

ಜನಾರೋಗ್ಯ—ಜ್ವರ ಹಿಂದಿನ ತಿಂಗಳಿಗಿಂತಲೂ ಹೆಚ್ಚಾ ಗಿ ವ್ಯಾಪಿಸಿತ್ತು. ಇದುಸಿವಾಯಿ ಜನಾರೋಗ್ಯ ಸಾಧಾರಣವಾಗಿ ಚ ನ್ನಾಗಿತ್ತು, ಖೈ ಜ್ವರಾಬಿನಿಂದ ಸತ್ತವರ ಸಂಖೆ ಬಹಳ ಕಮ್ಮಿ ಆಯಿತು, ಇದರಿಂದ 10 ಮಂದಿ ಸತ್ತರು ಹಿಂದಿನ ತಿಂಗಳಲ್ಲಿ 23 ಮಂದಿ ಹೋದರು ಇತರ ಕಾರಣಗಳಿಂದ ಸತ್ತವರ ವಿವರ ಹ್ಯಾಗಂದರೆ.

1876ನೇ ಜೂಲೈ ತಿಂಗಳಲ್ಲಿ	ಆಗಸ್ಟು ತಿಂಗಳಲ್ಲಿ		1876ನೇ ಜೂಲೈ ತಿಂಗಳಲ್ಲಿ	ಆಗಸ್ಟು ತಿಂಗಳಲ್ಲಿ
ಜ್ವರದಿಂದ	317	334	ಅಕಸ್ಮಾತ್ ವ ಘಾಯಪಟ್ಟದ್ದರಿಂದ	10	10
ಹೊಟ್ಟೇ ಸುಗ್ಗಿನಿಂದ ..	37	27	ಇತರ ರೋಗಗಳಿಂದ	174	159
ಶಿಡುಬಿನಿಂದ ..	6	8			

ಈ ತಿಂಗಳಲ್ಲಿ ಯೀಕೂನು 418 ಜನನಗಳಾದವು. ಸ್ ಱ 1876ನೇ ಜೂಲೈ ತಿಂಗಳಲ್ಲಿ 477 ಜನನಗಳಾದವು.

ಜಾನವರ್—ಈ ತಿಂಗಳಲ್ಲಿ ಡಿಸ್ಟ್ರಿಕ್ಟ ಮುಳೆ ನಷ್ಟವಾದ ಕಾಲ್ನಡೆಯು ಕಳದ ತಿಂಗಳಿಗಿಂತಲೂ ಬಹಳ ಕಮ್ಮಿ ಅಥವಾ ಈ ಕೆಳಗೆ ವಿವರಿಸಿರುವಹಾಗೆ ಈ ತಿಂಗಳಲ್ಲಿ 2229, ಹಿಂದಿನ ತಿಂಗಳಲ್ಲಿ 2741 ಸತ್ತವು.

1876ನೇ ಜೂಲೈ ತಿಂಗಳಲ್ಲಿ	ಆಗಸ್ಟು ತಿಂಗಳಲ್ಲಿ		1876ನೇ ಜೂಲೈ ತಿಂಗಳಲ್ಲಿ	ಆಗಸ್ಟು ತಿಂಗಳಲ್ಲಿ
ಹಸುಗಳು ವ ಯೆತ್ತುಗಳು	763	677	ಕುದರೆಗಳು	24	13
ಯಮ್ಮೆ ಕೋಣಗಳು	229	215	ಕತ್ತೆಗಳು	64	28
ಕುರಿ ವ ಮೇಕೆಗಳು	1661	1296	ಜುಮ್ಲಾ	2741	2229

ನಿರಖು—ಈ ತಿಂಗಳಲ್ಲಿ ಜಿನಸಿಗಳ ದಾರಣೆವಾಸಿಯು ಜಡಾವಾದವು.

B. KRISHNAIENGAR,
Dy. Commr.

ಮೈಸೂರು ಡಿಸ್ಟ್ರಿಕ್ಟು.

ಮಳೆ—ಈ ತಿಂಗಳೊಳಗೆ ಎಲ್ಲ ತಾಲ್ಲೂಕುಗಳಲ್ಲಿಯೂ ಮಳೆ ಬಿದ್ದಿರುತ್ತೆ, ಸರಾಸರಿಯಾಗಿ $2\frac{1}{2}$ ಅಂಗುಲಗಳೆಂದು ಅಳಿಯಲ್ಪಟ್ಟಿರುತ್ತೆ. ಏಳು ಅಂಗುಲಗಳು 55 ಸೆಂಟ್ಸ್ ಮಳೆ ಮೈಸೂರಲ್ಲಿ ಬಿದ್ದಿರುತ್ತೆ.

ಬೆಳೆ—ಅಭಿವೃದ್ಧಿಯಾಗಿದೆ. ಹುರಳಿ, ರಾಗಿ ಮತ್ತು ಇತರ ಬೆಳೆಗಳು ಬಿತ್ತಲ್ಪಟ್ಟವು.

ಆರೋಗ್ಯ—ಚನ್ನಾಗಿದೆ ಕುಲೆ 488 ಮಂದಿ ವ್ಯತಪಟ್ಟರು ಈ ಪೈಕಿ ಖೈ ಜ್ವರಾಬಿನಿಂದ 68.

ಕಾಲ್ನಡೆ—ಗೋವಾರಿ ರೋಗವು ಮೈಸೂರು, ಮಳವಳ್ಳಿ ಮತ್ತು ತಲಕಾಡು ತಾಲ್ಲೂಕುಗಳಲ್ಲಿ ವ್ಯಾಪಿಸುತ್ತಲೇನೇ ಇದೆ, ಇದರಿಂದ 312 ಕಾಲ್ನಡೆಗಳು ಹೋದವು. ಎಲ್ಲ ಕಾರಣಗಳಿಂದಲೂ ಕುಲೆ 2,521 ಕಾಲ್ನಡೆಗಳು ಹೋದವು.

ದಾರಣೆ—ಕೆಲವು ಮುಖ್ಯವಾದ ಜಿನಸಿಗಳ ದಾರಣೆಯು ಕೊಂಚ ತಗ್ಗಿರುತ್ತೆ.

C. J. PEARSE,
Dy. Commr.

ಚಿತ್ರದುರ್ಗ ಡಿಸ್ಟ್ರಿಕ್ಟ್.

ಹವ್ಯ—ಹೊಸದುರ್ಗದಲ್ಲಿ ವಿನಾ ಕಡಿಮೆ ಯಲ್ಲಾ ತಾಲ್ಲೂಕುಗಳಲ್ಲಿಯೂ ಕೊಂಚವಾಗಿ ಮಳೆ ಆಗಿರುತ್ತದೆ, ಪ್ರತಿ ತಾಲ್ಲೂಕ ಹೆಡ್ ಕ್ವಾರ್ಟರ್‌ನಲ್ಲಿಯೂ ಬಿದ್ದ ಮಳೆಯು ಈ ಕೆಳಗೆ ವಿವರಿಸಿರುತ್ತೆ,—

ಚಿತ್ರದುರ್ಗ	.. ಸೆಂಟ್ಸ್.	50	ಹಿರಿಯೂರು	.. ಸೆಂಟ್ಸ್	10
ದಾವಣಗೆರೆ	.. ..	50	ಬೂದಿಹಾಳ್	.. ..	47½
ಕಣಕುಪ್ಪ	.. ..	30	ಹೊಸದುರ್ಗ	.. ..	0
ದೊಡ್ಡೇರಿ	.. ..	30	ಪಾವಗಡ	.. ..	20

ದಿನಗಳು ಮೋಡವಾಗಿಯೂ ಛಳಿ ಬೀಸುತ ಯಿದ್ದವು.

ಫಸಲ್,—ಮಳೆಯಿಲ್ಲದ ಕಾರಣ ಯೆಲ್ಲಾ ತಾಲ್ಲೂಕುಗಳಲ್ಲಿಯೂ ಖುಷ್ಕಿ ಫಸಲ್ ಬಹಳ ಮಟ್ಟಿಗೆ ವಣಗುವ ಹಾಗೂ, ಯಿತರ ಫಸಲ್ ವಣಗಿ ಹೋದ ಹಾಗೂ ರಿಪೋರ್ಟಾಗಿರುತ್ತೆ. ಚಿತ್ರದುರ್ಗ, ದಾವಣಗೆರೆ, ಕಣಕುಪ್ಪ, ಬೂದಿಹಾಳ್, ಪಾವಗಡ ಈ ತಾಲ್ಲೂಕುಗಳಲ್ಲಿ ಹತ್ತಿ, ರಾಗಿ, ಸಾಮೆ, ಹುರಳಿ, ಸಜ್ಜೆ, ಅಚ್ಚೆಳ್ಳು, ಹರಳು ಪೇರಾವಾಗಿರುತ್ತವೆ. ಯಿತರ ಮೂರು ತಾಲ್ಲೂಕುಗಳಲ್ಲಿ ಯಾವದೂ ಪೇರಾವಾಗಿರುವದಿಲ್ಲ. ಈ ತಿಂಗಳಲ್ಲಿ ಜವರೆ, ಬರಗು, ನವಣೆ, ಗನ್ನ ಕಟುವಾಗಿರುತ್ತವೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಯೊಂದು ಕೆರೆಗೂ, ದೊಡ್ಡೇರಿ ತಾಲ್ಲೂಕಿನಲ್ಲಿ ಆರು ಕೆರೆಗಳಿಗೂ ನೀರು ಬಂದಿರುತ್ತೆ.

1537—8—0 ರೂಪಾಯಿಗಳ ಕಂದಾಯ ಬಾಳುವ ಜಮೀನು ಸಾಗುವಳಿಗೆ ತೆಗದುಕೊಳ್ಳಲ್ಪಟ್ಟಿರುತ್ತೆ.

ಆರೋಗ್ಯ,—ಡಿಸ್ಟ್ರಿಕ್ಟ್ ವಳಗೆ ವಿಶೇಷ ಜನವಿಲ್ಲದ ಪ್ರದೇಶಗಳಲ್ಲಿ ಖೈಜ್ವರಾಬ್ ವ್ಯಾಪಿಸಿತ್ತು. ಆದರೆ ಜನಾರೋಗ್ಯ ಸಾಧಾರಣವಾಗಿ ಚನ್ನಾಗಿ ಯಿತ್ತು.

ಈ ತಿಂಗಳಲ್ಲಿ ವಿವವಿದವಾದ ಕಾರಣಗಳಿಂದಲೂ 518 ಮಂದಿ ವ್ಯತಪಟ್ಟರು.

ಜಾನವಾರ್,—ಡಿಸ್ಟ್ರಿಕ್ಟ್‌ನಲೆಲ್ಲ ಕಾಲ್ನಡೆಯ ಸ್ಥಿತಿಯು ಬಹಳ ಕೆಟ್ಟದ್ದಾಗಿತ್ತು, ಗೋವಾರಿ ರೋಗದಿಂದಲೂ ಹೊಟ್ಟೆ ಗಿಲ್ಲದೆಯೂ 12,226 ಕಾಲ್ನಡೆ ಸತ್ತವು.

ನಿರಖು—ಜಿನಸಿಗಳ ದಾರಣೆವಾಸಿ ಬಹಳ ಚಡಾವಾಗುತ್ತಾ ಯಿದೆ.

E. F. H. ARMSTRONG,
Dy. Commr.

ಅಮೃತ ಮಹಲ್.

ದನಗಳ ಮುಖ್ಯವಾದ ಹರಾಜು.

ಅಮೃತ ಮಹಲ್ ದನಗಳ ಬಾಬತು, ಬೀಜದ ಬಗ್ಗೆ ತಕ್ಕ ಕೆಲವು ಹೋರಿಗಳು, ಹಸುವುಗಳು, ಕರುವುಗಳು, ಸಣ್ಣ ಯೆತ್ತುಗಳು ಯಿವುಗಳು ಸಹಿತ ಉಳಿದಿರುವ ಕಾಲ್ನಡೆ 1876ನೇ ಅಕ್ಟೋಬರ್ 26ನೇ ನುಕ್ಕಂ ಗುರುವಾರ ದಿನದಲ್ಲೂ ಆತರುವಾಯ ದಿನಗಳಲ್ಲೂ ಹುಣಸೂರಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಿಬಂಧನೆ—ನಗದು.

ಇದರಡಿ ರುಜು ಮಾಡತಕ್ಕವರನ್ನು ಕಳಿ ತಹಶೀಲ್ ತಿಳಿದುಕೊಳ್ಳಬಹುದು.

ಮು—ವಿ—50 ಜೊತೆ ಯೆತ್ತುಗಳು ಬಂಡಿಗೆ ತಯಾರ್ ಮಾಡಲ್ಪಡುವವು, ಮತ್ತು ಹೋರಿಗಳು ಜೊತೆಯಲ್ಲಿ ಹೋಗುವದಕ್ಕೆ ತಯಾರ್ ಮಾಡಲ್ಪಡುವವು.

CHAS. McINROY, *Major*,
Sub-Asstt. Commissary Genl.,
In charge Amrut Mahal, by Mysore.

MYSORE GOVERNMENT PRESS, BANGALORE—1876.